**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು

**LAC.No.159/2021**

ಆರ್**.**ಡಬ್ಲ್ಯೂ**. 1**

ದಿನಾಂಕಃ **29.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಖ್ಯ ವಿಚಾರಣೆ **1** ನೇ ಎದುರುದಾರರ ಪರ ಶ್ರೀ ಡಿಜಿಪಿ ವಕೀಲರಿಂದಃ**-**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ**.** ನಾನೇ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ **.**

ಪಾಟೀ ಸವಾಲು ಅರ್ಜಿದಾರರ ಪರ ಶ್ರೀ**RKR** ವಕೀಲರಿಂದಃ-

ಈಗ ನೋಡುತ್ತಿರುವ ದಾಖಲೆ ಸರ್ವೇ ನಂ**.342/3** ಕ್ಕೆ ಸಂಬಂಪಟ್ಟ ಅವಾರ್ಡ್ ನೋಟೀಸ್ ಅಂದರೆ ಸರಿ**.** ಅದನ್ನು ನಿಪಿ**-21** ಎಂದು ಗುರುತಿಸಲಾಯಿತು**.** ಭೂಸ್ವಾಧೀನವಾಗುವ ಕಾಲದಲ್ಲಿ ಈ ಪ್ರಾಜೈಕ್ ನಲ್ಲಿ ಎಸ್ ಎಲ್ ಎ ಓ ಆಗಿರಲಿಲ್ಲ ಅಂದರೆ ಸರಿ**.** ನಾನು ಯಾವುದೇ ದಾಖಲೆಗಳನ್ನು ಪರಿಶೀಲಿಸದೇ ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ**.** ಭೂಸ್ವಾಧೀನವಾಗಿರುವ ಜಮೀನು ಭಾಗಯ್ತು ಅಂದರೆ ಸರಿ**.** ಸದರಿ ಜಮೀನಿನಲ್ಲಿ ಕೃಷಿ ಹೊಂಡ ಮತ್ತು ಪೈಪ್ ಲೈನ್ ನ್ನು ವಶಪಡಿಸಿಕೊಂಡಿದ್ದೀರಿ ಅಂದರೆ ಸರಿ**.** ಕೃಷಿ ಹೊಂಡ ಮಾಡಬೇಕಾದರೆ ನೀರಾವರಿ ವ್ಯವಸ್ಥೆ ಇರುತ್ತದೆ ಅಂದರೆ ಸರಿಯಲ್ಲ**.** ಸದರಿ ಜಮೀನಿನಲ್ಲಿ

ಪೈಪ್ ಲೈನ್ ಇದೆ ಅಂದರೆ ಸರಿ. ನೀರಿನ ಸೌಲಭ್ಯ ಇರುತ್ತದೆ ಅಂದರೆ ಸರಿಯಲ್ಲ. ಕಾಮನದುರ್ಗ ಗ್ರಾಮದಿಂದ ಪಾವಗಡಕ್ಕೆ ಸುಮಾರು **8** ಕಿಮೀ ಅಂತರದಲ್ಲಿ ಇರುತ್ತದೆ ಅಂದರೆ ಸರಿಯಲ್ಲ. ರಾಜ್ಯ ಹೆದ್ದಾರಿಯಿಂದ ಸ್ವಾಧೀನಪಡಿಸಿಕೊಂಡ ಜಮೀನು **100** ಮೀಟರ್ ಅಂತರದಲ್ಲಿ ಇರುತ್ತದೆ ಅಂದರೆ ಸರಿಯಲ್ಲ. ನಾಗಲಮಡಿಕೆ ಗ್ರಾಮದಲ್ಲಿ ಸೋಲರ್ ಪಾರ್ಕ್ ಇದೆ ಅಂದರೆ ಸರಿ. ಸೋಲರ್ ಪಾರ್ಕ್ ಸ್ವಾಧೀನಪಡಿಸಿಕೊಂಡ ಜಮೀನಿನಿಂದ **1** ಕಿಮೀ ಅಂತರದಲ್ಲಿ ಇರುತ್ತದೆ ಅಂದರೆ ಸರಿಯಲ್ಲ. ಪಳ್ಳವಳ್ಳಿ ಗ್ರಾಮ ಮತ್ತು ಕಾಮನದುರ್ಗದ ಗ್ರಾಮ ಅಕ್ಕಪಕ್ಕದ ಗ್ರಾಮ ಅಂದರೆ ಸರಿಯಲ್ಲ. ಪಳ್ಳವಳ್ಳಿ ಗ್ರಾಮ ಮತ್ತು ಕಾಮನದುರ್ಗದ ಗ್ರಾಮ ಹೊಂದಿಕೊಂಡಂತಹ ಜಮೀನುಗಳು ಅಂದರೆ ಸರಿಯಲ್ಲ.

**2)** ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ **6** ಮೀಟರ್ ಎತ್ತರದಲ್ಲಿ ಕಾರಿಡಾರ್ ಆಗಿದೆ ಅಂದರೆ ಸರಿಯಲ್ಲ . ಪಳ್ಳವಳ್ಳಿ ಗ್ರಾಮದ ಬಳಿ ರೈಲ್ವೆ ಟೇಷನ್ ಮಾಡಿದ್ದೀರಿ ಅಂದರೆ ಸರಿ. ಪಳವಳ್ಳಿ ರೈಲ್ವೆ ಸ್ಟೇಷನ್ ನಿಂದ ಭೂಸ್ವಾಧೀನವಾಗಿರುವ ಜಮೀನು **2** ಕಿಮೀ ಅಂತರದಲ್ಲಿ ಇರುತ್ತದೆ ಅಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಸರಿಯಾದ ಮಾರುಕಟ್ಟೆ ಬೆಲೆ ನಿಗದಿಪಡಿಸಿಲ್ಲ ಅಂದರೆ ಸರಿಯಲ್ಲ . ಭೂಸ್ವಾಧೀನವಾಗಿರುವ ಪ್ರದೇಶವು ಕೈಗಾರಿಕೆಗಳಿಗೆ ಸೂಕ್ತವಾದ ಜಮೀನು ಅಂದರೆ ಸರಿಯಲ್ಲ . ಭೂಸ್ವಾಧೀನವಾಗಿರುವ ಸ್ವಳದಲ್ಲಿಯೇ ಟೋಲ್ ಮಾಡಿದ್ದಾರೆ ಅಂದರೆ ಸರಿಯಲ್ಲ . ಅರ್ಜಿದಾರರ ಜಮೀನಿನ ಅಕ್ಕಪಕ್ಕ

ಮನೆಗಳು ನಿರ್ಮಾಣವಾಗಿ ವಾಸಮಾಡಿಕೊಂಡಿದ್ದಾರೆ ಅಂದರೆ ಸರಿಯಲ್ಲ . ಪಳ್ಳವಳ್ಳಿ ಮತ್ತು ಕಾಮನದುರ್ಗ ಒಂದೇ ಗ್ರಾಮ ಪಂಚಾಯತಿಗೆ ಸೇರಿದವು ಅಂದರೆ ಗೊತ್ತಿಲ್ಲ.

**3)** ಈ ಪ್ರಕರಣದಲ್ಲಿ ಕಲಂ**.11(1)** ನೋಟಿಫಿಕೇಷನ್ ದಿ **24-08-2017** ರಂದು ಆಗಿರುತ್ತದೆ. ಕಲಂ**.11(1)**ನೋಟೀಸ್ ಪ್ರಕಟಿಸಿದ ಸಮಯದಲ್ಲಿ **1** ಗುಂಟೆಗೆ **1** ಲಕ್ಷ ಮಾರುಕುಟ್ಟೆ ದರ ಇತ್ತು ಅಂದರೆ ಸರಿಯಲ್ಲ. ಜಮೀನಿನ ಪಕ್ಕಸರ್ಕಾರದ ವಿದ್ಯುತ್ ಶೇಖರಣ ಘಟಕವನ್ನು ಸರ್ಕಾರಿ ಸ್ಥಾಪಸಿತು ಅಂದರೆ ಸರಿಯಲ್ಲ.

**4)** ಭೂಮಿಗೆ ಮಾರುಕಟ್ಟೆ ದರವನ್ನು ನಿಗದಿಪಡಿಸುವ ಕಾಲದಲ್ಲಿ ಕ್ರಯದ ಕ್ರರಾರು ಮತ್ತು ಕ್ರಯಪತ್ರವನ್ನು ನೋಡುತ್ತೇವೆ ಅಂದರೆ ಸರಿ. ಹೆಚ್ಚಿನ ಪರಿಹಾರ ನೀಡಬೇಕಾಗುತ್ತದೆಯೆಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**
ಓ.ಹೇ.ಕೇ.ಸರಿ ಇದೆ.

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು